IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 11, 2022

# ಪಂಪನ ಸಮನ್ವಯ

Dr Vijayanand A wagge, Associate professor in Kannada, HRSM college Gangavathi Saraswati giri anegundi Road Gangavathi.

ಕನ್ನಡ ಸಾಹಿತ್ಯದಲ್ಲಿ ಆದಿಕವಿ ನಾಡೋಜ, ಕವಿತಾಗುಣಾರ್ಣವ, ಸರಸ್ವತಿ ಮಣಿಹಾರಂ ಸಂಸಾರ ಸಾರೋದಯಂ, ಸುಕವಿಜನ ಪುರಾಣಕವಿ ಎಂಬೆಲ್ಲ ಬಿರುದುಗಳಿಗೆ ಪಾತ್ರನಾಗಿರುವ 'ಪಂಪ' ಕವಿರತ್ನಾತ್ರೆಯ ಮೊದಲಿಗನು. ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿಯು ಆದಿಕವಿಯಾದಂತೆ ಕನ್ನಡ ಸಾಹಿತ್ಯಕ್ಕೆ ಪಂಪನೇ ಆದಿ ಕವಿಯಾಗಿ ಇಂದಿಗೂ ಸಾರ್ವಭೌಮನಾಗಿ ಉಳಿದುಕೊಂಡಿದ್ದಾನೆ. ಪಂಪ ಮಹಾಕವಿ ಮಾತ್ರವಲ್ಲ ಮಹಾಕಾವ್ಯಗಳ ಸಂಪ್ರದಾಯದ ಹರಿಕಾರಕೂಡ. "ಆನೆ ನಡೆದಿದೆ ಬೀದಿ" ಎನ್ನುವಂತೆ ಪಂಪ ಅನುಸರಿಸಿದ ಕಾವ್ಯಶೈಲಿ ಕಾವ್ಯ ರಚನಾ ಸಂಪ್ರದಾಯದ ಪ್ರಧಾನಗುಣ, ಪ್ರಸಾದ ಗಾಂಭೀರ್ಯ, ಅಭಿವ್ಯಕ್ತಿ, ಕೊಂಕುನುಡಿ, ಮೃದು ಪದರಚನೆ, ಹಿತಮಿತವಾದ ಮೃದುವಚನದ ಪೂರ್ಣತೆ ಮತ್ತು ಸಂಯಮ.

ಪಂಪ ಎರಡು ಮಹಾಕಾವ್ಯಗಳನ್ನು ರಚನೆಮಾಡಿದ್ದಾನೆ, 'ಆದಿಪುರಾಣ' ಮತ್ತು ಪಂಪಭಾರತ ಇದಕ್ಕೆ ಇನ್ನೊಂದು ಹೆಸರೇ ವಿಕ್ರಮಾರ್ಜುನವಿಜಯವೆಂದು ಆದಿಪುರಣ ಆಗಮಿಕ ಕಾವ್ಯವಾದರೆ, ಪಂಪಭಾರತ ಲೌಕಿಕ ಕಾವ್ಯ. ಈ ರೀತಿಯ ಎರಡು ಕಾವ್ಯ ಪ್ರಕಾರಗಳನ್ನು ಬರೆಯುವ ಸಂಪ್ರದಾಯ ಮಹಾಕವಿ ಪಂಪನಿಂದಲೇ ಪ್ರಾರಂಭಗೊಂಡಿದ್ದು ವಿಶೇಷ ಪುಲಿಗೆರೆಯ ತಿರುಳ್ಗನ್ನಡದಲ್ಲಿ ತನ್ನ ಕಾವ್ಯಗಳನ್ನು ರಚನೆ ಮಾಡಿದ್ದಾನೆ. "ಬೆಳಗುವೆನಿಲ್ಲಿ ಲೌಕಿಕ ಮನ್ ಅಲ್ಲಿ ಜಿನಾಗಮಂ" ಎಂದು. ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ಕಾವ್ಯಗಳ ಪ್ರಕಾರಗಳ ವಿಶಿಷ್ಟತೆಯನ್ನು ಸೂಚಿಸಿದ್ದಾನೆ. ಆದಿಪುರಾಣ ಪಂಪನ ಆದಿಕೃತಿ. ಮೊದಲ ಜೈನ ತೀರ್ಥಂಕರ ಆದಿದೇವನ ಮನುಜನ ಜನ್ಮಯಾತ್ರೆಯ ಕಥೆ ಒಳಗೊಂಡಿದೆ. ಪೂರ್ವ ಪುರಾಣದಲ್ಲಿ ಕಾವ್ಯಕ್ಕಿಂತ ಪುರಾಣದೃಷ್ಟಿ ಹೆಚ್ಚಾಗಿದೆ. ಆದಿಪುರಾಣದಲ್ಲಿ ಪುರಾಣಕ್ಕಿಂತ ಕಾವ್ಯದೃಷ್ಟಿ ಹೆಚ್ಚಾಗಿ ಫಲಿಸಿದೆ. ಆದಿಪುರಾಣ ಜೈನಧರ್ಮ ಪ್ರಭಾವದಿಂದ ರಚನೆಗೊಂಡಿದ್ದು; ಇದರ ವಸ್ತು ಜೈನಪುರಾಣದ ಕಥೆ ಹರಿವಂಶ ಪೂರ್ವಪುರಾಣ ಅನುಸರಿಸಿಯೂ ಆಗಮಿಕ ಕಾವ್ಯವನ್ನು ನಿರಸಗೊಳಿಸದೇ ರಸಪ್ರವಾಹವನ್ನು ಹರಿಸಿದ್ದು ಪಂಪ. ನೆಗೆಳ್ದ ಆದಿಪುರಾಣದೊಳದಿವುದು ಕಾವ್ಯಧರ್ಮಮಂ ಧರ್ಮಮುಮಂ" ಕಾವ್ಯಶೈಲಿಯಲ್ಲಿ ದೇಸಿ ಮಾರ್ಗಗಳ ಜಿನನುಡಿ ಪ್ರೌಢೋಕ್ತಿಗಳ ಸಮನ್ವಯಕ್ಕೆ ಆದರ್ಶಪ್ರಿಯನಾಗಿದ್ದಾನೆ ಪಂಪಕವಿ.

"ವಿಕ್ರಮಾರ್ಜುನವಿಜಯ" ಪಂಪನ ಎರಡನೇ ಕೃತಿ. ಮಹಾಭಾರತದ ಲೋಕಪುಜ್ಯ ವ್ಯಕ್ತಿಗಳಿಂದ ಪ್ರಭಾವಿತನಾಗಿ ರಚಸಿದ ಲೌಕಿಕ ಮಹಾಕಾವ್ಯ. ಈ ಕಾವ್ಯದ ಮೂಲ ಸಂಸ್ಕೃತ ವ್ಯಾಸಭಾರತ. ಕತೆ ಪಿರಿದಾಡೊಡಂ ಕತೆಯ ಮೆಯ್ಗುಡಲಿಯದೆ ಮುಂ ಸಮಸ್ತ ಭಾರತ ಮನಪೂರ್ವಮಾಗೆ ಸೆಲೆ ಪೇಳ್ದ ಕವಿಶ್ವರರಿಲ್ಲ. ಇಲ್ಲಿ. ಪಂಪನ ಆತ್ಮ ವಿಶ್ವಾಸ ಮತ್ತು ನಮ್ರತೆಕೂಡಿಕೊಂಡಿದೆ. ವ್ಯಾಸ ಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನ್ನೀಸುವೆಂ ಕವಿ ವ್ಯಾಸನೆಂಬ ಗರ್ವ ಮೆನಗಿಲ್ಲವೆಂದು ಹೇಳುತ್ತಾರೆ. ಇವು ಎರಡು ಪ್ರೌಢ ಚಂಪು ಕಾವ್ಯಗಳು ಪಂಪ ಸಮನ್ವಯ ಶೀಲನೂ ಸವ್ಯಸಾಚಿಯೂ ಆದ ವ್ಯಕ್ತಿಯಾಗಿದನೆಂದು ತಿಳಿದುಬರುತ್ತದೆ. ಕವಿಯಾಗಿದ್ದಂತೆ ಕಲಿಯೂ ಕೂಡ ಆಗಿದ್ದನು. ಕವಿತೆ ನಗೆಳ್ತೆಯಂ ನಿರೆಸೆ ಜೋಳದ ಪಾಳೆ ನಿಜಾಧಿನಾಥನಾಹದೊಳ... ವಂ ಕಲಿಯೋ ಸತ್ಯವಿಯೋ ಕವಿತಾಗುಣಾರ್ಣವಂ ಎಂದು ತನ್ನನ್ನು ತಾನು ಹೊಗಳಿಕೊಂಡಿದ್ದಾನೆ.

ಪುಲಗೆರೆಯ ತಿರುಳ್ಗನ್ನಡದಲ್ಲಿ ತನ್ನ ಕಾವ್ಯರಚಿಸುವ ಮೂಲಕ ಕಾವ್ಯದಲ್ಲಿ ಮಾರ್ಗ ದೇಸಿಯತೆಯನ್ನು ಕುರಿತು ಪ್ರಸ್ತಾಪಿಸಿದ್ದಾನೆ. ಮಾರ್ಗವೆಂದರೆ ಸಾಮಾನ್ಯವಾಗಿ ಲಕ್ಷಣ ಸಮನ್ವಿತ ಪ್ರೌಢ ಪದಾವಲಿಯೆಂದು, ದೇಸಿ

IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 11, 2022

ಎಂದರೆ ಜನಸಾಮಾನ್ಯರು ಆಡುವ ಭಾಷೆಯ ವಿಶಿಷ್ಟ ನುಡಿಗಟ್ಟೆಂದು ಪಂಪನಿಗೆ ತನ್ನ ಕಾವ್ಯ ವೈಶಿಷ್ಟವಾದ ದೇಸಿಯ ಬಗ್ಗೆ ಅರಿವು ಮಾತ್ರವಲ್ಲದೆ ಅಪಾರವಾದ ಹೆಮ್ಮೆಯೂ ಇದೆ. ಪಂಪ ಶೈಲಿ–ವರ್ಣನೆಗಳಲ್ಲಿ ಹಿತಮಿತವಾದ ಮೃದುವಚನ " ಕಿರಿದರೊಳ್ಪಿರಿದು" ರಸ ಧ್ವನಿ ಪ್ರವಣತೆ, ದೇಸಿಯ ಔಚಿತ್ಯನಾದ ಸೂಕ್ಷ್ಮತೆ ಕಂಡು ಬರುತ್ತದೆ.

"ಬಗೆಪೊಸ ತಪ್ಪುದಾಗಿ ಮೃದು ಬಂಧದೊಳೊಂದುವುದು ಒಂದಿ ದೇಸಿಯೊಳ್ ಪುಗುವುದು, ಪೊಕ್ಕು ಮಾರ್ಗದೊಳ್ ತಳ್ವುದು ತಳ್ವೊಡೆ ಕಾವ್ಯಬಂಧಮೊಪ್ಪಗುಂ" ಎಂದು ವಿಕ್ರಮಾರ್ಜುನ ವಿಜಯದಲ್ಲಿ ದೇಸಿ ಮಾರ್ಗಗಳ ಸುಂದರ ಸಮನ್ವಯವು ಇಲ್ಲಿ ಫಲಿಸಿದೆ. ಕನ್ನಡದ ದೇಸಿಯ ಬಳಕೆ ಪಂಪ ಹೇಗೆ ಆತ್ಮೀಕರಿಸಿಕೊಂಡಿದನೆಂಬುದು. ಅವನ ಮಾರ್ಗಸಂಸ್ಕಾರದಿಂದ ಕನ್ನಡ ಪದಬಳಿಸುವ ಜಾಣ್ಮೆ ಅಸಾಧರಣವಾದದ್ದು. ಕನ್ನಡ ವಿಶಿಷ್ಟ ಲಕ್ಷಣಗಳನ್ನು ದೇಸಿ ಎಂದು ಕವಿರಾಜಮಾರ್ಗದಲ್ಲಿ ಸೂಚಿಸಲಾಗಿದೆ. ( ದೇಸಿಯನೆ ನೀರೆಸಿ ಖಂಡ ಪ್ರಾಸ ಮನತಿಶಯವಿದೆಂದು) ಹಲವು ದೃಷ್ಟಿಯಿಂದ ಸಮನ್ವಯವಾದಿಯಾದ ಪಂಪನು ಮಾರ್ಗದೇಸಿಯನ್ನು ಹಿತಮಿತವಾಗಿ ಬಳಸಿದ್ದು ಎರಕ ಹೊಯ್ದಂತೆಯಾಗಿದೆ.

" ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ ಕೃಪಾಚಾರ್ಯನಿಲ್ಲಾ !
ಕುರುರಾಜಾ ನಿನ್ನ ತಮ್ಮಂದಿರೊಳಿನಿಬರೊಳಾರಿಲ್ಲ ಗಾಂಗೇಯನಿಲ್ಲಾ!
ಮರುಳೇ ಗಾಂಡವಿ ಯಾರೆಂದುಣಿಕೆಗಳೆವೆ ಗಂಧರ್ವರಯ್ವಂದು ನಿಯವ
ಕರುವಿಟ್ಟಂತಿರ್ದುವಿಲ್ಲಾ ನೆರೆದ ಕುರುಬಲಂ ತಂದವಂ ಪಾರ್ಥನಲ್ಲಾ "!

ಗಂಧರ್ವನು, ದುರ್ಯೋಧನನನ್ನು ಬಂಧಿಸಿ ಹಿಡಿದುಕೊಂಡು ಹೋಗುವಾಗ ದ್ರೋಣರು, ಕರ್ಣ, ಅಶ್ವತ್ಥಾಮ ಕೃಪಾಚಾರ್ಯ ನಿನ್ನ ಸಹೋದರರು ಭೀಷ್ಮರು ಇದು ಯಾರು ನಿನ್ನನ್ನು ಬಂಧನದಿಂದ ಬಿಡಿಸಲಾಗಲ್ಲಿಲ್ಲ; ಮಧ್ಯಮ ಪಾಂಡವನಾದ ಅರ್ಜುನ ನಿನ್ನನ್ನು ಬಂಧನದಿಂದ ಬಿಡಿಸಿ ಮುಕ್ತಿದೊರಕಿಸಿದ ಅಂತವನನ್ನೇ ನೀನು ಯಾರೆಂದು ಪ್ರಶ್ನೇ ಮಾಡುತ್ತಿಯಾ ಮರುಳೆ ಎಂದು ಮುರಾರಿ ದುರ್ಯೋಧನನನ್ನು ಪ್ರಶ್ನಿಸುತ್ತಾನೆ. ಈ ಮಾತಿನ ದಾಟಿಯಲ್ಲಿ ಕಾಕುವಿಕೆ, ಛೇಡಿಸುವಿಕೆ ಸಂದರ್ಭದಲ್ಲಿ ಪಂಪ ಬಳಿಸಿದ ದೇಸಿಯ ಪದಬಳಿಕೆ ಇಲ್ಲಿ ವ್ಯಕ್ತಗೊಂಡಿದೆ.

"ಎಲ್ಲೋಗು ದೂತನಪ್ಪನ
ಬೆಳ್ಪಿನ ನುಡಿಗೇಳ್ದು ಮುಳಿಯಲಾಗದು ನೀನುಂ
ಮೇಳ್ಪಟ್ಟು ವಿದುರನೆಂಬೀ
ತೊಳ್ಪಟಿಯ ಮನೆಯ ಕೊರೆ ನುಡಿಯಿಸೆ ನುಡಿದ್ಯೆ"

ಇಲ್ಲಿ ಕಾವ್ಯದ ಭಾವ ಪರಿಸರವನ್ನು ಸಂರಕ್ಷಿಸಿಕೊಳ್ಳಲು ವಾಕ್ಯದ ಸಹಜರೂಪವನ್ನು ಪದಗಳ ಅನುಕ್ರಮಣಿಕೆಯನ್ನು ಬದಲಾಯಿಸುವುದು ಕಂಡುಬರುತ್ತದೆ. ಕ್ರಿಯಾಪದದ ಸ್ಥಾನ ಬದಲಾಯಿಸಿದರೂ ನಿರ್ಧಾರದ ಬಣ್ಣವನ್ನು ಉಳಿಸಿಕೊಂಡಿರುವುದು ಪಂಪನ ಶೈಲಿಯಲ್ಲಿ ಚಾರಿತ್ರಿಕ ಕಾರಣಗಳಿಂದಲ್ಲೂ ಪಂಪನ ದೇಸಿಯತೆಯನ್ನು ಗಮನಿಸುವುದರ ಜೊತೆಗೆ ವಸ್ತುವಿನ ದೃಷ್ಟಿಯಿಂದಲೂ ಮಾರ್ಗದೇಸಿಯ ಸಮನ್ವಯತೆ ಇರುವುದು.

ಪಂಪಭಾರತ ಅಥವಾ ವಿಕ್ರಮಾರ್ಜುನ ವಿಜಯ ಪಂಪನ ಎರಡನೆ ಕಾವ್ಯ. ಇಲ್ಲಿ ದೇಸಿ ಮಾರ್ಗಗಳ ಸಮನ್ವಯ ಸಿದ್ದಿಯ ವಿಷಯಕ್ಕೆ ಕನ್ನಡ ಕಾವ್ಯ ಪ್ರಪಂಚದಲ್ಲಿ ಪ್ರಥಮ ಮತ್ತು ಕೊನೆಯದು. ಮಾರ್ಗಕ್ಕೆ

ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 11, 2022

ಮಾದರಿಯಂತೆ ದೇಸಿಗೆ ಅದು ಮೇಲ್ಪಂಕ್ತಿ. ತನ್ನ ಕಾಲ ಸಂದರ್ಭದಲ್ಲಿ ಜನಸಾಮಾನ್ಯರು ಆಡುವ ಮಾತು ಮೆಚ್ಚಿಕೊಂಡು ಅದಕ್ಕೆ ಮಾರ್ಗದ ರಾಜವೇಶವನ್ನು ತೊಡಿಸಿರುವಂತದ್ದು.

"ದುಜೋದನನದೆನದೇಂ ಮರುಳಾದನೋ ಬಡಿಗಂಡನಿಲ್ಲ ಪಾಲನೆ ಕಡಂ
ಮಕ್ಕಳಂ ಆಂ ಕೊಂದೊಡೆ ತನ್ನಿಕ್ಕಿದ ತತ್ತಿಯನೆ ಪಾವು ನೋಣಿವಂತಕ್ಕುಂ"

ಎಂಬ ಭೀಷ್ಮರ ಮಾತು, ಅದಕ್ಕೆ ಪ್ರತಿರೋಧವಾಗಿ ಕರ್ಣನಾಡುವ ಮಾತು 'ಎನೆಗೆ ಪಟ್ಟಂಗಟ್ಟಾ ಕುಲಂ ಕುಲಮಲ್ತು ಚಲಂ ಕುಲಂ ಅಣ್ಮುಕುಲಂ ಗುಣಂ ಕುಲಂ ಅಭಿಮಾನವೊಂದೇ ಕುಲಂ" ವೆನ್ನುವಲ್ಲಿ ಪಂಪ ಕವಿಗೆ ಸಹಜವಾಗಿ ಸಾಮಾನ್ಯ ಜನರ ಜೀವನ ಅವರ ಬದುಕನ್ನು ಕುರಿತು ಗಾಢವಾದ ಪರಿಚಯವಿತ್ತೆಂದು ಸಾಕ್ಷಿಯಾಗುತ್ತದೆ.

ಪಂಪಭಾರತ ದೇಸಿ ಮಾರ್ಗಗಳ ಸಮನ್ವಯತೆಯಿಂದ ಕೂಡಿದೆ ಮಾರ್ಗಕ್ಕೆ ಅದು ಮಾದರಿ ದೇಸಿಗೆ ಅದು ಮೇಲ್ಪಂಕ್ತಿ. ಪಂಪ ತನ್ನ ಕಾಲದ ಸಾಮಾನ್ಯ ಜನರು ಆಡುವ ಭಾಷೆಗೆ ರಾಜವೇಷವನ್ನು ತೊಡಸಿ ಕಾವ್ಯಲೋಕದಲ್ಲಿ ಅವನು ಮೆರೆಸಿದ ಪವಾಡ ಚಿರಸ್ಮರಣೀವಾದದ್ದು ಪಂಪಭಾರತ 1–20 ನೆಯ ಪದ್ಯವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಬೇಟೆಗಾಗಿ ಬಂದ ಶಂತನು ತಿರುಗುತ್ತ ಬಂದು

" ಮೃಗಯಾವ್ಯಾಜದಿನೊರ್ಮೆ ಶಂತನು ತೊಳಲ್ತರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪುತಟ್ಟಿ ಮಧುಪಂಬೋಲ್ ಸೋಲ್ತು ಕಂಡೊಲ್ದು ನ!
ಲ್ಮೆಗೆ ತತ್ಕನ್ಯಕ್ಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ"

ರಾಜನಾದ ಶಂತನು ಬೇಟೆಯಾಡಲೆಂದು ಬಂದು ಅರಣ್ಯದಲ್ಲಿ ರೂಪವತಿಯಾದ ಸತ್ಯವತಿಯನ್ನು ನೋಡಿ ದುಂಬಿಯಂತೆ ಮನಸೋತು ಕಣ್ಣಾರೆ ಆಕೆಯನ್ನು ನೋಡಿ ಮನಸಾರೆ ಒಪ್ಪಿಕೊಂಡು ಒಲಿದು ಒಲಿದಾ ಪ್ರೀತಿಗೆ ಗಟ್ಟಿಗೊಳಿಸಲು ಆಕೆಯ ಕೈ ಹಿಡಿದು ಬಾ ಹೋಗೋಣವೆಂದಾಗ ಸತ್ಯವತಿ ನಾಚಿ ಕೇಳುವುದಿದ್ದರೆ ನಮ್ಮ ತಂದೆಯನ್ನು ಕೇಳು ವೆನ್ನುವಲ್ಲಿ ಬಳಕೆಗೊಂಡಿರುವ ದೇಸಿಯ ಸರಳ ಮಾತು ಕಾಕು ವ್ಯಂಗ್ಯಾರ್ಥಗಳು ಮೂಡಿ ಬರುವದರ ಜೊತೆಗೆ ಪ್ರೌಢಿಮೆಯನ್ನು ಮೆರೆದಿದೆ,

ಮಹಾಭಾರತ ಕಥೆಯ ದುರಂತ ಮೂಲ"ಜೂಜಾಟ ಮತ್ತು ಭೀಮನ ಪ್ರತಿಜ್ಞೆ ಪ್ರಸಂಗಗಳು ಪಂಪನ ಪ್ರತಿಭೆ ದೇಸಿ ಮತ್ತು ಮಾರ್ಗಗಳ ಸಮನ್ವಯತೆಯಿಂದ ಕೂಡಿದೆ. ದುಶ್ಯಾಸನ, ದ್ರೌಪದಿಯನ್ನು ಎಳೆದು ಸಭಾ ಮಧ್ಯಕ್ಕೆ ತಂದಾಗ ತೊಳ್ತೆ ತೊಳ್ತವೆ ಸಕ್ಕೈ ಪೋ ಪೋಗು ಎಂಬ ಮೂದಲಿಕೆ ಭೀಮನ ರೌದ್ರದಿಂದ ಆಡುವ ನುಡಿ ಇಲ್ಲಿ ಸಹಜವಾಗಿ ಮೂಡಿಬಂದಿದೆ.

"ಕುಡಿವೆಂ ದುಶ್ಯಾಸನೋರಸ್ಥಳ ಮನಗಲೆ ಪೋಳ್ದಾ ಕೆನ್ನೆತರಂ ಪೊ
ಕ್ಕುಡಿವೆಂ ಪಿಂಗಾಕ್ಷನೂರುದ್ವಯ ಮನುರು ಗದಾಘಾತದಿಂ ನುಚ್ಚುನೂರಾ
ಗೊಡೆವೆಂ ತದ್ರತ್ನ ರಶ್ಮಿ ಪ್ರಕಟಮಕುಟಮಂ ನಂಬು ನಂಬೆನ್ನ ಕಣ್ಣಿಂ ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ"

ದುಶ್ಯಾಸನನ ಎದೆಯನ್ನು ಗದೆಯಿಂದ ಹೊಡೆದು ಸೀಳಿ ಅವನ ಕೆಂಪಾದ ರಕ್ತವನ್ನು ಬಿಟ್ಟುಬಿಡದೆ ಕುಡಿಯುತ್ತೇನೆ. ಜೊತೆಗೆ ಅವನ ಎರಡು ತೊಡೆಗಳನ್ನು ಗದೆಯಿಂದ ಹೊಡೆದು ಮುರಿಯುತ್ತೇನೆವೆಂಬಲ್ಲಿ ದೇಸಿಯ ತಿರಳ್ಗನ್ನಡ ಮತ್ತು ಮಾರ್ಗದ ಸಮನ್ವಯತೆಯ ಪೌಢಿಮೆ ಮೆರೆದಿದೆ.

ಪಂಪನ ದೇಸಿ ಮತ್ತು ಮಾರ್ಗಗಳೆರಡು ಸಮನ್ವಯದಿಂದಾಗಿ ಕಾವ್ಯಕ್ಕೆ ಒಂದು ಹೊಸ ನೆಲೆ ಸಿಕ್ಕಿದ್ದು ಕಾವ್ಯಗಳ ವಸ್ತು , ಭಾಷೆ , ಅಭಿವ್ಯಕ್ತಿ ವಿಧಾನ, ಪಾತ್ರಚಿತ್ರಣ, ತನ್ನ ಕಾಲದ ಸ್ಥಿತಿಗತಿಗಳನ್ನು ಒಳಗೊಳ್ಳುವ ಬಗೆ

ISSN PRINT 2319 1775 Online 2320 7876
*Research Paper* **© 2012 IJFANS. All Rights Reserved**, UGC CARE Listed ( Group -I) Journal Volume 11, Iss 11, 2022

ಇವೆಲ್ಲ ವಿಶಿಷ್ಟವಾಗಿವೆ. ಪಂಪ ತನ್ನ ಆದಿಪುರಾಣ, ವಿಕ್ರಮಾರ್ಜುನವಿಜಯ ಕಾವ್ಯಗಳಲ್ಲಿನ ವೈಶಿಷ್ಟ್ಯಗಳನ್ನು ಒಟ್ಟಾರೆಯಾಗಿ ದೇಸಿ ಎಂದು ವರ್ಣಿಸಿದ್ದಾನೆ. ಆದಿಪುರಾಣದ ಕೊನೆಯ ಭಾಗದಲ್ಲಿ ಸ್ವರ್ಗಾಪವರ್ಗಕ್ಕ ಮಾಸದಮಪ್ಪ ಮಾರ್ಗದೊಳ್ಳಂ ದೇಸಿಯೊಳಂ ಪೊದಳ್ದೆಸೆವಿನಂ ಸಂಸಾರ ಸಾರೋದಯಂ ಎಂದು ಹೇಳಿದ್ದಾನೆ. ವಿಕ್ರಮಾರ್ಜುನವಿಜಯದಲ್ಲಿ ಮೊದಲ ಆಶ್ವಾಸದಲ್ಲಿ ಒಂದಡೆ ಬಗೆ ಪೊಸತಪ್ಪುದಾಗಿ ಮೃದುಬಂಧದೊಂದುವುದು ಒಂದು ದೇಸಿಯೊಳ್ ಪುಗುವುದು" ಪಂಪನಿಗೆ ತನ್ನ ಕಾವ್ಯ ವೈಶಿಷ್ಟ್ಯ ದೇಸಿಯ ಬಗ್ಗೆ ಅರಿವು ಮಾತ್ರವಲ್ಲದೆ ಅಪಾರವಾದ ಹೆಮ್ಮೆಯೂ ಗಟ್ಟಿಗೊಂಡಿದೆ. ಪಂಪನ ಕಾವ್ಯದ ದಾರಿ ಆನೆ ನಡೆದುದೇ ಮಾರ್ಗವೆಂಬತಾಯಿತ್ತು, ನಂತರ ಬಂದ ಪೊನ್ನ, ರನ್ನ , ನಾಗಚಂದ್ರ, ನಯಸೇನ, ಜನ್ನ, ರಾಘವಾಂಕ, ಹರಿಹರ, ಅನೇಕ ಕವಿಗಳು ಹೊಸ ಹೊಸ ಪ್ರಯೋಗ ಮಾಡುತಲೇ ಬಂದಿದ್ದಾರೆ.